

ಭಲೇ ಜೋಡಿ ಲಾಲೂ ಮತ್ತು ನಿತೀಶ್ ಕುಮಾರ್

ಜನಪ್ರಿಯ. ಎಚ್ಚೆತ್ತ ಸರ್ಕಾರದ ಆರೋಗ್ಯ ಇಲಾಖೆಗಳು ಮ್ಯಾಗಿ ನೂಡಲ್ಸ್ ಗೋದಾಮುಗಳ ಮೇಲೆ ದಾಳಿ ನಡೆಸಿತು. ಜನರೂ ಆತಂಕದಿಂದ ಖರೀದಿಯನ್ನು ನಿಲ್ಲಿಸಿದರು. ಸ್ವತಃ ಕಂಪೆನಿಯೇ ಮುಂದೆ ನಿಂತು, ಮ್ಯಾಗಿ ಸ್ಟಾಕ್‌ಗಳನ್ನು ನಾಶ ಮಾಡಲು ತೊಡಗಿತು. 'ಭಾರತದಲ್ಲಿ ಹೀಗೆ ನಾಶ ಮಾಡಲಾದ ಮ್ಯಾಗಿ ನೂಡಲ್ಸ್ ಪ್ಯಾಕ್‌ಗಳನ್ನು ಸಾಲಾಗಿ ಇಟ್ಟಿದ್ದರೆ 50 ಲಕ್ಷ ಮೈಲಿಗಳಷ್ಟು ಉದ್ದ ಇರುತ್ತಿತ್ತು' ಎಂದೂ ವರದಿಯೊಂದು ಪ್ರಕಟವಾಯಿತು! ವರ್ಷದ ಕೊನೆಗೆ ಇನ್ನೊಂದು ಲ್ಯಾಬ್ ವರದಿ ಬಂದಿದ್ದು, ಮ್ಯಾಗಿಯಲ್ಲಿ ಸತುವಿನ ಅಂಶ ಲೆಕ್ಕಕ್ಕಿಂತ ಹೆಚ್ಚು ಇಲ್ಲ ಎಂದಿದೆ! ಜನ ಮತ್ತೆ ಮ್ಯಾಗಿ ಖರೀದಿಸಲು ತೊಡಗಿದ್ದಾರೋ ಇಲ್ಲವೋ ಗೊತ್ತಿಲ್ಲ; ಆದರೆ ಈ ಮಧ್ಯೆ ಬಾಬಾ ರಾಮ್‌ದೇವ್ ಕಂಪೆನಿಯ ಹೊಸ ನೂಡಲ್ಸ್‌ಗಳು ಮಾರುಕಟ್ಟೆಗೆ ಬಂದು ಭರ್ಜರಿ ವ್ಯಾಪಾರ ಶುರು ಮಾಡಿವೆ ಎನ್ನುವ ಸುದ್ದಿಯೂ ಬಂತು!

ಫೇಸ್‌ಬುಕ್ ಕಂಪೆನಿಯ ಒಡೆಯ ಮಾರ್ಕ್ ಜೂಕರ್‌ಬರ್ಗ್ ಭಾರತಕ್ಕೆ ಭೇಟಿ ನೀಡಿ, ಪ್ರಧಾನಿ ಮೋದಿಯವರನ್ನು ಭೇಟಿಯಾದರು. ಫೇಸ್‌ಬುಕ್ ಸಾಮಾಜಿಕ ಜಾಲತಾಣಕ್ಕೆ ಜಗತ್ತಿನ ವಿವಿಧ ದೇಶಗಳಲ್ಲಿ ಒಟ್ಟು 114 ಕೋಟಿ ಬಳಕೆದಾರರಿದ್ದು, ಅದರಲ್ಲಿ 12.5 ಕೋಟಿ ಭಾರತದಲ್ಲಿದ್ದಾರೆ. ಹಾಗಾಗಿ ಫೇಸ್‌ಬುಕ್ ಬಳಕೆದಾರರ ಕುತೂಹಲ ಕೆರಳಿಸಿದ ಭೇಟಿಯಿದು. ಈ ಭೇಟಿಯ ಸಂದರ್ಭದಲ್ಲಿ ಜೂಕರ್‌ಬರ್ಗ್ ಹೇಳಿದ್ದಾರೆನ್ನಲಾದ ಸಂಗತಿಯೊಂದು ನಮ್ಮ ಮಾಧ್ಯಮಗಳಲ್ಲಿ ಮಸಾಲೆಭರಿತ ಚರ್ಚೆಗೆ ಕಾರಣವಾಯಿತು. 'ಕೆಲವು ವರ್ಷಗಳ ಹಿಂದೆ ಫೇಸ್‌ಬುಕ್ ಕಂಪೆನಿ ನಷ್ಟದಲ್ಲಿದ್ದು ಅದನ್ನು ಮಾರಾಟ ಮಾಡಲು ಯೋಚಿಸಿದ್ದೆ. ಆ ಹಂತದಲ್ಲೇ ಆ್ಯಪಲ್ ಕಂಪೆನಿಯ ಮಾಲಕ ಸ್ಟೀವ್‌ಜಾಬ್ಸ್ ಜತೆ ಉತ್ತರಾಖಂಡದ ದೇವಾಲಯವೊಂದಕ್ಕೆ ಭೇಟಿ ನೀಡಿದ್ದೆ. ಅಲ್ಲಿಂದ ವಾಪಸ್ ಹೋದ ಬಳಿಕ ಮಾರಾಟದ ಆಲೋಚನೆ ಕೈಬಿಟ್ಟೆ. ಕಂಪೆನಿಗೆ ಒಳ್ಳೆಯದಾಯಿತು' ಎಂದು ಜೂಕರ್‌ಬರ್ಗ್ ಹೇಳಿದ್ದರಂತೆ. ವರ್ಷದ ಕೊನೆಯಲ್ಲಿ ಫೇಸ್‌ಬುಕ್‌ನ 'ಫ್ರೀ ಬೇಸಿಕ್ಸ್' ಎಂಬ 250 ಉಚಿತ ಸೇವೆಗಳ ಫ್ಲಾಟ್‌ಫಾರಂ ವಿವಾದದ ಹೊಗೆ ಎಬ್ಬಿಸಿದೆ. ದೊಡ್ಡ ಸಂಖ್ಯೆಯಲ್ಲಿ ಭಾರತೀಯ ಗ್ರಾಹಕರು ಈ 'ಏಕಸ್ವಾಮ್ಯದ ಸೇವೆ'ಯನ್ನು ವಿರೋಧಿಸುತ್ತಿದ್ದಾರೆ.



ಮಾರ್ಕ್ ಝುಕರ್‌ಬರ್ಗ್

ಗುಜರಾತ್‌ನಲ್ಲಿ ಪಟೇಲ್ ಸಮುದಾಯಕ್ಕೂ ಶಿಕ್ಷಣ ಮತ್ತು ಸರ್ಕಾರಿ ನೌಕರಿಯಲ್ಲಿ ಮೀಸಲಾತಿ ನೀಡಬೇಕೆಂಬ ಚಳವಳಿ ಭುಗಿಲೆದ್ದದ್ದು ದೇಶಾದ್ಯಂತ ಸುದ್ದಿಯಾಯಿತು. ಹಾರ್ದಿಕ್ ಪಟೇಲ್ ಎನ್ನುವ ಯುವಕ ಈ ಚಳವಳಿಯ ನೇತೃತ್ವ ವಹಿಸಿಕೊಂಡದ್ದು ಚಳವಳಿಯನ್ನು ಬಗ್ಗುಬಡಿಯಲು ಗುಜರಾತ್ ಸರ್ಕಾರ ಸರ್ವಪ್ರಯತ್ನ ಮಾಡಿತು. 'ಹಿಂದುಳಿದ ಜಾತಿಗಳಿಗೆ ಇರುವ ಮೀಸಲಾತಿ ಸೌಲಭ್ಯವನ್ನು ರದ್ದುಗೊಳಿಸುವ ತಂತ್ರದ ಅಂಗವಾಗಿಯೇ ಪಟೇಲ್ ಸಮುದಾಯದ ಈ ಚಳವಳಿ ನಡೆದಿದೆ' ಎಂಬ ಆರೋಪವೂ ವ್ಯಾಪಕವಾಗಿ ಕೇಳಿಸಿತು. ವರ್ಷದ ಕೊನೆಯಲ್ಲಿ ಹಾರ್ದಿಕ್ ಪಟೇಲ್ ಹಲವು ಮೊಕದ್ದಮೆಗಳನ್ನು ತಮ್ಮ ಮೈಮೇಲೆ ಎಳೆದುಕೊಂಡು ಹೋರಾಟ ಮುಂದುವರಿಸಿದ್ದಾರೆ. ಬಿಜೆಪಿ ಗೆ ರಾಜಕೀಯವಾಗಿ ಹೊಸ ತಲೆನೋವು ಉಂಟು ಮಾಡಿದ ಚಳವಳಿಯಿದು.

2015

## ಸಾಕ್ಷಿಗಳ ಕಣ್ಮರೆ!

ಮಧ್ಯಪ್ರದೇಶದಲ್ಲಿ ಉದ್ಯೋಗ ನೇಮಕಾತಿಯಲ್ಲಿ ಅಕ್ರಮವೆಸಗಿದ ವ್ಯಾಪಂ ಹಗರಣದ ತನಿಖೆ ನಡೆದಿದೆ. ಆದರೆ ಈ ಹಗರಣದ ಸಾಕ್ಷಿಗಳಾದ (ಪತ್ರಕರ್ತರೂ ಸೇರಿ) 49 ಮಂದಿ ನಿಗೂಢವಾಗಿ ಸಾವನ್ನಪ್ಪಿರುವುದು ದೊಡ್ಡ ಸುದ್ದಿ. ಈ ಹಗರಣದಲ್ಲಿ ಮುಖ್ಯಮಂತ್ರಿ, ಅವರ ಪತ್ನಿ ಮತ್ತು ಅಲ್ಲಿನ ರಾಜ್ಯಪಾಲರ ಹೆಸರೂ ಕೇಳಿಬಂದಿದೆ. ಅತ್ಯಾಚಾರ ಆರೋಪಿ 'ದೇವಮಾನವ' ಅಸಾರಾಂ ಬಾಪು ತನಿಖೆ ಪ್ರಕರಣದಲ್ಲೂ ಒಬ್ಬ ಸಾಕ್ಷಿ ನಾಪತ್ತೆಯಾಗಿದ್ದಾರೆ. ಒಂಬತ್ತು ಸಾಕ್ಷಿಗಳ ಮೇಲೆ ಹಲ್ಲೆ ನಡೆದಿದ್ದು, ಮೂವರು ಕೊಲೆಯಾಗಿದ್ದಾರೆ.



27ರ ಹರೆಯದ ಕನಿಕಾ, ಭಾರತದ ಈ ವರ್ಷದ ಅತ್ಯಂತ ಸಾಹಸಿ ಉದ್ಯಮಿ ಎಂದು ಹೆಸರು ಪಡೆದಿದ್ದಾರೆ. ಈಕೆ ಸ್ಥಾಪಿಸಿದ ಜೆಟ್‌ಸೆಟ್ ಗೋ ಎಂಬ ಕಂಪೆನಿ, ಖಾಸಗಿ ಜೆಟ್ ಪ್ಲೇನ್, ಹೆಲಿಕಾಪ್ಟರ್‌ಗಳ ಸೇವೆಯನ್ನು ಒದಗಿಸುವ ಕಂಪೆನಿ. 20ರ ಹರೆಯದಲ್ಲೇ ಕ್ಯಾನ್ಸರ್ ಪತ್ತೆಯಾದರೂ, ಎದೆಗುಂದದೆ ಅದರ ಜತೆ ಹೋರಾಡುತ್ತಿರುವ ಕನಿಕಾ, ವಾಯುಯಾನ ಕ್ಷೇತ್ರದಲ್ಲಿ ಯಶಸ್ವಿ ಉದ್ಯಮ ಸ್ಥಾಪಿಸಿದ ಮೊದಲ ಮಹಿಳೆ.





ಐತಿಹಾಸಿಕ ಭೇಟಿ- ಮೋದಿ ಮತ್ತು ಒಬಾಮ

### ಅಸಹಿಷ್ಣುತೆಯ ರಾದ್ಧಾಂತ

ವರ್ಷದ ಕೊನೆಯ ನಾಲ್ಕು ತಿಂಗಳಲ್ಲಿ ಸಮೂಹ ಮಾಧ್ಯಮಗಳಲ್ಲಿ ಅತ್ಯಂತ ಹೆಚ್ಚು ಬಾರಿ ಕೇಳಿಬಂದ ಶಬ್ದ –ಅಸಹಿಷ್ಣುತೆ. ಉತ್ತರ ಪ್ರದೇಶದ ದಾದ್ರಿ ಎಂಬ ಹಳ್ಳಿಯಲ್ಲಿ ಸಂಘ ಪರಿವಾರದ ಸದಸ್ಯರು ಮೊಹಮ್ಮದ್ ಅಖ್ಲಾಕ್ ಎಂಬಾತನ ಮನೆಗೆ ನುಗ್ಗಿ ಹಿಗ್ಗಾಮುಗ್ಗ ಥಳಿಸಿ, ಆತ ಸ್ಥಳದಲ್ಲೇ ಮೃತಪಟ್ಟ ಘಟನೆ ದೇಶಾದ್ಯಂತ ಕೋಲಾಹಲಕ್ಕೆ ಕಾರಣವಾಯಿತು. 'ಅಖ್ಲಾಕ್‌ನ ಮನೆಯ ಫ್ರಿಜ್‌ನಲ್ಲಿ ದನದ ಮಾಂಸ ಇತ್ತು' ಎಂಬ ಗಾಳಿಸುದ್ದಿ ಹಬ್ಬಿದ್ದೇ ಈ ದಾಳಿಗೆ ಕಾರಣವಾಯಿತು. ಪೊಲೀಸರ ತನಿಖೆಯ ಬಳಿಕ ಫ್ರಿಜ್‌ನಲ್ಲಿ ಇದ್ದದ್ದು ದನದ ಮಾಂಸ ಅಲ್ಲ ಎನ್ನುವುದು ಬಹಿರಂಗವಾಯಿತು.

ಈ ಮಧ್ಯೆ ಮಹಾರಾಷ್ಟ್ರದ ಬಿಜೆಪಿ ಸರ್ಕಾರ, ರಾಜ್ಯದಲ್ಲಿ ದನದ ಮಾಂಸ ಮಾರಾಟ ಮತ್ತು ಬಳಕೆಯನ್ನು  ನಿಷೇಧಿಸಿತು. ಇದರ ವಿರುದ್ಧ ಮುಸ್ಲಿಮರು ಮತ್ತು ದಲಿತರು ಪ್ರತಿಭಟನೆ ನಡೆಸಿದರು. ಬೀಫ್ ನಿಷೇಧ, ದಾದ್ರಿ ಘಟನೆ ಮತ್ತು ಕರ್ನಾಟಕದಲ್ಲಿ ಖ್ಯಾತ ಸಂಶೋಧಕ ಡಾ.ಎಂ.ಎಂ.ಕಲ್ಬುರ್ಗಿ ಅವರನ್ನು ಅಪರಿಚಿತ ದುಷ್ಕರ್ಮಿಗಳು ಗುಂಡಿಟ್ಟು ಕೊಂದದ್ದು– ಅಸಹಿಷ್ಣುತೆಯ ಕುರಿತ ದೊಡ್ಡ ಚರ್ಚೆಯನ್ನೇ ಹುಟ್ಟುಹಾಕಿತು. ಉತ್ತರಪ್ರದೇಶದಲ್ಲಿ ದಲಿತ ವರ್ಗಕ್ಕೆ ಸೇರಿದ ಹಸುಳೆಯರಿಬ್ಬರನ್ನು ಜೀವಂತ ಸುಟ್ಟು ಹಾಕಿದ ಘಟನೆಯೂ ಈ ಚರ್ಚೆಯನ್ನು ಕಾವೇರಿಸಿತು. 'ಅಸಹಿಷ್ಣುತೆ ಹೆಚ್ಚುತ್ತಿದೆ, ಅದಕ್ಕೆ ಆಳುವ ಎನ್‌ಡಿ ಸರ್ಕಾರ ಕುಮ್ಮಕ್ಕು ನೀಡುತ್ತಿದೆ' ಎಂದು ಆರೋಪಿಸಿ ನೂರಕ್ಕೂ ಹೆಚ್ಚು ಪ್ರಮುಖ  ಸಾಹಿತಿಗಳು ತಮ್ಮ ಪ್ರಶಸ್ತಿಗಳನ್ನು ಹಿಂತಿರುಗಿಸಿದ್ದು ಕಾವೇರಿದ ಚರ್ಚೆಗೆ ಕಾರಣವಾಯಿತು. ಈ ಸುದ್ದಿ ಅಂತರರಾಷ್ಟ್ರೀಯ ಮಟ್ಟದಲ್ಲೂ ಪ್ರತಿಧ್ವನಿಸಿತು.

ಈ ಮಧ್ಯೆ ಅಸಹಿಷ್ಣುತೆಯನ್ನು ಪ್ರತಿಭಟಿಸಿ, ಬಾಲಿವುಡ್‌ನ 'ಸೂಪರ್ ಸ್ಟಾರ್'ಗಳಾದ ಶಾರೂಕ್ ಖಾನ್ ಮತ್ತು ಅಮೀರ್ ಖಾನ್ ನೀಡಿದ ಹೇಳಿಕೆಗಳು ಚರ್ಚೆಗೆ ರಾಜಕೀಯ ತಿರುವು ನೀಡಿದವು. ಇಬ್ಬರೂ ತಾರೆಯರ ವಿರುದ್ಧ ಆಳುವ ಪಕ್ಷದ ಸದಸ್ಯರು ಪ್ರತಿಭಟನೆ ನಡೆಸಿದರು. ಈ ಪ್ರತಿಭಟನೆ ಯಾವ ಮಟ್ಟಕ್ಕೆ ಹೋಯಿತೆಂದರೆ, ವರ್ಷದ ಕೊನೆಯಲ್ಲಿ ಬಿಡುಗಡೆಯಾದ ಶಾರೂಕ್ ಖಾನ್ ನಟನೆಯ 'ದಿಲ್‌ವಾಲೆ' ಸಿನಿಮಾದ ಕಲೆಕ್ಷನ್ ನಿರೀಕ್ಷೆಯ ಮಟ್ಟಕ್ಕೆ ತಲುಪಲಿಲ್ಲ. ಸ್ವತಃ ಶಾರೂಕ್ ಖಾನ್, 'ನಾನು ಅಸಹಿಷ್ಣುತೆ ಇದೆಯೆಂದು ಹೇಳಲಿಲ್ಲ. ಕೆಲವರು ನನ್ನ ಮಾತುಗಳನ್ನು ತಿರುಚಿದರು' ಎಂದು ಯೂ–ಟರ್ನ್ ತೆಗೆದುಕೊಂಡರು. ಅಮೀರ್‌ಖಾನ್ ಪತ್ನಿ ಕಿರಣ್‌ರಾವ್ 'ದೇಶಬಿಟ್ಟು ಹೋದರೆ ಒಳ್ಳೆಯದೇನೋ..' ಎಂದ ಮಾತುಗಳು ಅವರಿಗೇ ತಿರುಗಿಬಿದ್ದು, ಕೊನೆಗೆ ಸ್ವತಃ ಅಮೀರ್‌ಖಾನ್ 'ದೇಶಬಿಟ್ಟು ಹೋಗುವುದಿಲ್ಲ' ಎಂದು ಸ್ಪಷ್ಟನೆ ನೀಡಬೇಕಾಯಿತು.

ಪ್ರತಿಭಟನೆ, ಪ್ರತಿಭಟನೆಯ ವಿರುದ್ಧ ಆಕ್ರೋಶ, ಪರ–ವಿರೋಧಿ ವಾದ–ವಿವಾದಗಳು ವರ್ಷದ ಕೊನೆಯವರೆಗೂ ನಡೆದೇ ಇವೆ. ಪ್ರಧಾನಿ ನರೇಂದ್ರ ಮೋದಿಯವರು ಲಂಡನ್ನಿನ ಪ್ರವಾಸದಲ್ಲಿ 'ಭಾರತದಲ್ಲಿ ಯಾವುದೇ ಧರ್ಮಗಳ ಬಗ್ಗೆ ಅಸಹಿಷ್ಣುತೆ ಇಲ್ಲ' ಎಂದು ಸ್ಪಷ್ಟನೆ ಕೊಟ್ಟರು. ಸಂಸತ್ತಿನಲ್ಲೂ ಈ ಕುರಿತು ದೊಡ್ಡ ಮಟ್ಟದ ಚರ್ಚೆ ನಡೆಯಿತು.

### ಚೆನ್ನೈಯ ಮಳೆ- ದೆಹಲಿಯ ಹೊಗೆ

ವರ್ಷದ ಕೊನೆಗೆ ಚೆನ್ನೈ ಮಹಾನಗರವನ್ನು ಮುಳುಗಿಸಿದ ಮಹಾಮಳೆ, ಕರ್ನಾಟಕದಲ್ಲೂ ನೋವಿನ ಅಲೆಗಳನ್ನು ಎಬ್ಬಿಸಿತು. ನವೆಂಬರ್ ಎರಡನೇ ವಾರದಲ್ಲಿ ಆರಂಭವಾದ ಮಹಾಮಳೆ ಒಂದೇ ಸಮನೆ ಸುರಿದು ಡಿಸೆಂಬರ್‌ವರೆಗೂ ಚೆನ್ನೈಯನ್ನು ಇನ್ನಿಲ್ಲದಂತೆ ಕಾಡಿತು. ಮಹಾಪ್ರವಾಹದಲ್ಲಿ ಸಾವಿರಾರು ಮನೆ, ಕಚೇರಿ, ಫ್ಯಾಕ್ಟರಿಗಳು ಮುಳುಗಿದವು. ಸಾವಿರಾರು ಜನರು ನಿರಾಶ್ರಿತರಾದರು. ಶಾಲೆ, ಕಚೇರಿ, ಉದ್ಯಮಗಳು ರಜಾ ಘೋಷಿಸಿದವು.

ಪ್ರವಾಹದಲ್ಲಿ ಸಿಕ್ಕುಬಿದ್ದ ನೂರಾರು ಕುಟುಂಬಗಳನ್ನು ರಕ್ಷಿಸಲು ಸೇನೆಯನ್ನೂ ಕರೆಸಬೇಕಾಯಿತು. ಈ ಮಧ್ಯೆ ನಾಗರಿಕರ ನೂರಾರು ಸ್ವಯಂಸೇವಾ ತಂಡಗಳು ಕಷ್ಟದಲ್ಲಿದ್ದವರನ್ನು ರಕ್ಷಿಸಿದವು. ಮೂರು ವಾರಗಳ ಕಾಲ ಚೆನ್ನೈಯನ್ನು ಕಾಡಿದ ಮಹಾಮಳೆ ಒಟ್ಟು 15,000 ಕೋಟಿ ರೂಪಾಯಿಗೂ ಹೆಚ್ಚು ನಷ್ಟ ಉಂಟು ಮಾಡಿದೆ ಎನ್ನುವುದು ಒಂದು ಅಂದಾಜು. ಹವಾಮಾನ ವೈಪರೀತ್ಯದಿಂದಾದ ಎಲ್‌ನಿನೋ ಪರಿಣಾಮವೇ ಈ ರೀತಿ ಮಳೆ ಸುರಿಯಲು ಕಾರಣ ಎನ್ನುವುದು ತಜ್ಞರ ಅಭಿಪ್ರಾಯ. ಸಾವಿರಾರು ಸಂತ್ರಸ್ತರ ಪುನರ್ವಸತಿಗಾಗಿ ಈಗಲೂ ಹಣ ಹೊಂದಿಸಲಾಗುತ್ತಿದ್ದು, ಬೆಂಗಳೂರು, ಮುಂಬೈ ಮುಂತಾದ ಮಹಾನಗರಗಳಿಗೂ ಇದೊಂದು ಎಚ್ಚರಿಕೆ ಎಂದು ವ್ಯಾಖ್ಯಾನಿಸಲಾಗಿದೆ.

ಮಳೆಯ ಕಾಟ ದಕ್ಷಿಣದಲ್ಲಾದರೆ, ಉಸಿರಾಟಕ್ಕೇ ತೊಂದರೆ ನೀಡುವ ಹೊಗೆಯ ಕಾಟ ಉತ್ತರದ ತುದಿಯ ದೆಹಲಿಯದ್ದು. ಡಿಸೆಂಬರ್‌ನ ಹಲವು ದಿನಗಳಲ್ಲಿ ದೆಹಲಿಯ ನಗರವಿಡೀ ಹೊಗೆ ಕವಿದು, ಶಾಲೆಗಳಗೆ ರಜೆ ಘೋಷಿಲಾಯಿತು. 'ಇಡೀ ಪ್ರಪಂಚದಲ್ಲೇ ಅತ್ಯಂತ ಹೆಚ್ಚು ಹವಾಮಾಲಿನ್ಯ ಇರುವ ನಗರ ದೆಹಲಿ' ಎಂದು ವಿಶ್ವ ಆರೋಗ್ಯ ಸಂಸ್ಥೆಯೇ ಪ್ರಕಟಿಸಿದ ಬಳಿಕ ದೆಹಲಿ ಸರ್ಕಾರ ಮೈಕೊಡವಿ ಎದ್ದು ನಿಂತಿದೆ. ಜನವರಿ ಒಂದರಿಂದ ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧ ಪ್ರಕಟವಾಗಿದೆ. ವಾರದ ಮೂರು ದಿನ ಮಾತ್ರ ಬೆಸಸಂಖ್ಯೆಯ ನೋಂದಣಿ ಇರುವ ವಾಹನಗಳು ರಸ್ತೆಗೆ ಇಳಿಯಬೇಕು, ಉಳಿದ ಮೂರು ದಿನ ಸರಿಸಂಖ್ಯೆಯ ನೋಂದಣಿ ಇರುವ ವಾಹನಗಳಿಗೆ ಅವಕಾಶ ಎಂದು ಪ್ರಕಟಿಸಲಾಗಿದೆ. ಈ ಪ್ರಯೋಗ ಎಷ್ಟರಮಟ್ಟಿಗೆ ದೆಹಲಿಗೆ ನೆರವಾಗುತ್ತದೋ



ಸುಂದರ್ ಪಿಚೈ